Doc-31
T-P.2

(1)

R No KRNN 32

28 - 2 - 1975

ಸ್ವರ್ಣ ಮಹೋತ್ಸವ ನೆರವೇರಿದ ಪತ್ರಿಕೆ

in ★ ★ ★ ★ ★

58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
- For Influential Publicity -

ಮುದ್ರಕರು ಆರಮನೆ ಲಕ್ಷ್ಮೀದಾರ್ ಎಂ. ವಿಶ್ವನಾಥ್ ಸಂಪಾದಕರು ಧರ್ಮಪ್ರಚಾರಧುರೀಣ ಎಂ. ಎಸ್. ಶಿವಣ್ಣ 8 ಪು.

ಅಕ್ಕಿ ವ್ಯಾಪಾರವನ್ನು ನಿಲ್ಲಿಸಲು ಕಡಪ ವರ್ತಕರ ನಿರ್ಧಾರ

ನಂ. ಡಿಎಂಇ-ಆರ್‌ಇಹೆಚ್-33 152/67-68

ವಿಭಾಗ ಅರಣ್ಯ ಕಚೇರಿ, ಮೈಸೂರು ವಿಭಾಗ, ಮೈಸೂರು.
ತಾ 19-2-1975

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಷೆಡ್ಯೂಲಿನಲ್ಲಿ ನಮೂದು ಮಾಡಿರುವ ಕೆಲಸಗಳಿಗಾಗಿ ಮೊಹರಾದ ಟೆಂಡರ್‌ಗಳನ್ನು ಮೈಸೂರು – 1 ರಲ್ಲಿರುವ, ಮೈಸೂರು ವಿಭಾಗದ, ವಿಭಾಗ ಅರಣ್ಯ ಅಧಿಕಾರಿಯವರು ಅಥವಾ ಈ ಉದ್ದೇಶಕ್ಕಾಗಿ ಅವರಿಂದ ಅಧಿಕಾರ ಹೊಂದಿದ ಮತ್ತಾವುದೇ ಅಧಿಕಾರಿಯವರಾಗಲಿ 5-3-1975 ರ ಮಧ್ಯಾಹ್ನ 4 ಗಂಟೆ ವರೆಗೆ ಸ್ವೀಕರಿಸುವರು ಟೆಂಡರ್‌ದಾರರು ಹಾಜರಿದ್ದಲ್ಲಿ ಅದೇ ದಿನ ಮಧ್ಯಾಹ್ನ 4-15 ಗಂಟೆಗೆ ಟೆಂಡರ್‌ಗಳನ್ನು ಒಡೆಯಲಾಗುವುದು.

ಷೆಡ್ಯೂಲ್

ಕ್ರ ಸಂ	ಕೆಲಸಗಳ ಹೆಸರು	ಎಸ್ಟಿಮೇಟ್ ಅದ ಅಂದಾಜು ಹಣ
1	ಹೆಚ್‌ಡಿ ಕೋಟೆ ತಾ ಬೇಗೂರು ರೇಂಜಿನಲ್ಲಿ ಬನ್ನೂರು ಗದ್ದೆಯಲ್ಲಿ ಅರಣ್ಯ ಗಾರ್ಡುಗಳಿಗೆ ಷೆಡ್‌ಗಳನ್ನು ನಿರ್ಮಾಣ ಮಾಡುವುದು (ಯೂನಿಟ್ I)	ರೂ 9996
2	ಡಿಟೋ ಡಿಟೋ (ಯೂನಿಟ್ II)	ರೂ 9996
3	ಡಿಟೋ ಹೆಚ್‌ಡಿ ಕೋಟೆ ತಾ ಬೇಗೂರು ರೇಂಜಿನಲ್ಲಿ ಬನ್ನೂರು ಗದ್ದೆಯಲ್ಲಿ ಅನೆ ಶಿಬ್ಬಂದಿಗೆ (ಯೂನಿಟ್ I)	ರೂ 9996
4	ಡಿಟೋ ಡಿಟೋ (ಯೂನಿಟ್ II)	ರೂ 9996
5	ಡಿಟೋ (ಯೂನಿಟ್ I) ಕಾಕನಕೋಟೆ ರೇಂಜಿನಲ್ಲಿರುವ ಬಲ್ಲೆಯಲ್ಲಿ	ರೂ 9996
6	ಡಿಟೋ (ಯೂನಿಟ್ II)	ರೂ 9996
7	ಡಿಟೋ ಕಾಕನಕೋಟೆ ರೇಂಜಿನಲ್ಲಿರುವ ಬಲ್ಲೆಗುಲ್ಲಿ ಅರಣ್ಯ ಗಾರ್ಡುಗಳಿಗೆ (ಯೂನಿಟ್ I)	ರೂ 9996
8	ಡಿಟೋ ಡಿಟೋ (ಯೂನಿಟ್ II)	ರೂ 9996

ಸೂಚನೆ :—

1 ಪ್ರತಿ ಕೆಲಸಕ್ಕೆ ರೂ. 250 ಇ. ಎಂ. ಡಿ ಪಾವತಿ ಮಾಡಿದ ಚಲನ್ ಆಗಿರಬೇಕು.

2 ಪ್ರತಿ ಕೆಲಸಕ್ಕೆ ರೂ 5 ಕ್ಲರ್ಕ್ ಮಾಂಟಿ ತೆರಿಗೆಯನ್ನು ಪಾವತಿ ಮಾಡಿದಲ್ಲಿ 4-3-1975 ರ ಸಂಜೆ 5-30 ಗಂಟೆ ವರೆಗೆ ಕಚೇರಿ ಕೆಲಸದ ವೇಳೆಗಳಲ್ಲಿ ಟೆಂಡರ್ ಫಾರಂಗಳನ್ನು ಕೊಡಲಾಗುವುದು.

4 ಕೆಲಸಗಳನ್ನು ಮುಗಿಸಲು ಕಾಲಾವಧಿ 3 ತಿಂಗಳು

4 ಕೆಲಸದ ವೇಳೆಗಳಲ್ಲಿ ಮೈಸೂರಿನಲ್ಲಿರುವ ಮೈಸೂರು ವಿಭಾಗದ ವಿಭಾಗ ಅರಣ್ಯ ಅಧಿಕಾರಿಯವರು ಅಥವಾ ಕಾಕನಕೋಟೆ ಮತ್ತು ಬೇಗೂರು ರೇಂಜ್‌ಗಳ ರೇಂಜ್ ಅರಣ್ಯ ಅಧಿಕಾರಿಯವರು ಇವರೊಡನೆ ಯಾವುದೇ ವಿವರಗಳಿಗಾಗಿ ವ್ಯವಹರಿಸಬಹುದು

ಈ ರ ಪ್ಪ,
ವಿಭಾಗ ಅರಣ್ಯ ಅಧಿಕಾರಿಯವರು, ಮೈಸೂರು.

ಪಾಕ್‌ಗೆ ಆಯುಧ

ಸುಮಾರು ಒಂದು ನೂರು ಮಿಲಿಯ ಅಮೇರಿಕಾ ಡಾಲರುಗಳಿಗೆ ಸರಿಸಮನಾಗಿ ಪಾಕೀಸ್ತಾನಕ್ಕೆ ಅಮೇರಿಕಾ ಆಯುಧಗಳ ಮಾರಾಟ ಮಾಡುವದೆಂದು ಭಾರತಕ್ಕೆ ಸೂಚಿತರಾಗಿರುವ ಅಮೇರಿಕಾ ರಾಯಭಾರಿ ಶ್ರೀ ವಿಲಿಯಂ ಬಿ ಸ್ಯಾಕ್ಸ್‌ಬಿ ಬಾಂಗ್ಲಾದೇಶದಲ್ಲಿ ತಿಳಿಸಿರುವರು

★

ಅಫ್ಘನ್ ಪ್ರತಿಭಟನೆ

ಪಾಕೀಸ್ತಾನಕ್ಕೆ ಆಯುಧಗಳನ್ನು ಸರಬರಾಜು ಮಾಡಬೇಕೆಂಬ ಅಮೇರಿಕ ನಿರ್ಧಾರವನ್ನು ಅಫ್ಘಾನಿಸ್ತಾನ ಖಂಡಿಸಿದೆ

★

ಮಾತುಕತೆಗೆ ಸಿದ್ಧ

ಎರಡು ದೇಶಗಳಲ್ಲಿ ಸುಧಾರಿತ ಪರಿಸ್ಥಿತಿಯನ್ನು ಹೊಂದುವ ಸಲುವಾಗಿ ಭಾರತ ಅಪೇಕ್ಷೆ ಪಟ್ಟರೆ ಚೀನಾ ಮಾತುಕತೆಗೆ ಸಿದ್ಧವಿದೆ ಎಂದು ಚೀನಾದ ಉಪ ಪ್ರಧಾನಿ ಜೆನ್‌ಹಿಪೆನ್ ತಿಳಿಸಿದ್ದಾರೆ. ಕಲ್ಕತ್ತಾದಲ್ಲಿ ಪತ್ರಿಕೆಯುವರೊಡನೆ ಅವರು ಈ ಮಾತನ್ನು ತಿಳಿಸಿದಾಗ, ಪತ್ರಿಕೆಯುವರೊಬ್ಬರು, ಪ್ರಧಾನಿ ಇಂದಿರಾ ಗಾಂಧಿ ಮಾವೋ ತ್ಸೆ ತುಂಗ್‌ರಿಗೆ ಬರೆದ ಕಾಗದಕ್ಕೆ ಉತ್ತರ ಕೊಟ್ಟಿಲ್ಲ ಎನ್ನಲು, ಚೀನೀಯರು ಉತ್ತರ ಕೊಡುತ್ತಾ, ಭಾರತ ಹಾಗೂ ಚೀನಾ ಒಂದು ದಿನ ಸ್ನೇಹ ಸಂಪರ್ಕ ಪಡೆಯುವುದು ಎಂದರು.

● ಪಾಕೀಸ್ತಾನಕ್ಕೆ ಆಯುಧ ಸರಬರಾಜು ಮಾಡುವ ಅಮೇರಿಕದ ನಿರ್ಧಾರವನ್ನು ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ರಾಜ್ಯಸಭೆಯಲ್ಲಿ ಖಂಡಿಸಿದರು.

ವರ್ತಕರ ನಿರ್ಧಾರ

ಕಡಪದ ಪಣ್ಣಾ ಹಾಗೂ ಚಿಲ್ಲರೆ ಅಕ್ಕಿ ವರ್ತಕರು ಈ ತಿಂಗಳು 28 ನೇ ತಾರೀಖಿನಿಂದ ಅಕ್ಕಿ ವ್ಯಾಪಾರವನ್ನು ಮಾಡದಿರಲು ನಿರ್ಧರಿಸಿದ್ದಾರೆ ಅವರು ಬಹಿರಂಗ ಪೇಟೆ ದರದಲ್ಲಿ ಅಕ್ಕಿ ಮಾರಾಟ ಮಾಡುವವರು ವ್ಯಾಪಾರವನ್ನು ಅವರು ಕೈ ಬಿಡುವುದಕ್ಕೆ ಕಾರಣ. ಪೋಲೀಸರಿಂದ ಆಗುತ್ತಿರುವ ಹಿಂಸೆ ಮತ್ತು ಪ್ರತಿ ದಿನ ಮಾಮೂಲನ್ನು ಕೇಳುವುದಾಗಿದೆ ಎನ್ನಲಾಗಿದೆ ಒಂದೂವರೆ ತಿಂಗಳಿನಿಂದ ಸಗಟು ವ್ಯಾಪಾರಿಗಳು ಅಕ್ಕಿ ವ್ಯಾಪಾರ ನಿಲ್ಲಿಸಿರುವರು ಹೀಗಾದಲ್ಲಿ ಅಲ್ಲಿನ ಜನರಿಗೆ ಅಕ್ಕಿ ಸಿಗುವುದೇ ಕಷ್ಟವಾಗುವುದು

★

ನ್ಯಾಯಾಂಗ ವಿಚಾರಣೆಗೆ ಕರೆ

ಪಡುಪೆರೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಶ್ರೀ ಭಾಸ್ಕರ ಶಮಿತ ಅವರ ಕೊಲೆಯ ಆರೋಪದ ಸಂಬಂಧದಲ್ಲಿ ನ್ಯಾಯಾಂಗ ವಿಚಾರಣೆ ನಡೆಯಬೇಕೆಂದು ದಕ್ಷಿಣ ಕನ್ನಡ ಅಖಿಲ ಕಾಲೇಜ್ ಮಂಡಲಿಯ ಸಭೆ ಒತ್ತಾಯ ಮಾಡಿದೆ

●

ಆರಂಭದಲ್ಲೇ ಅನಾಹುತ

ಕೆಲವು ದಿನಗಳಲ್ಲಿಯೇ ಬಲ್ಬು ತಯಾರಿಸಲು ಆರಂಭಿಸಬೇಕಾಗಿದ್ದ ಸಿರ್ಸಿಯಲ್ಲಿನ ಬಲ್ಬು ಕಾರ್ಖಾನೆಗೆ ಬೆಂಕಿ ಬಿದ್ದು ಅರ್ಧ ನಾಶವಾಯಿತು.

★

● ಹೈದರಾಬಾದಿನಲ್ಲಿ ಅಡ ಬೆಂಕಿ ಅನಾಹುತದಲ್ಲಿ ನಾಲ್ವರು ಪತ್ರರು

ಕಾಶ್ಮೀರ ಭೂ ಸುಧಾರಣೆ ಶಾಸನ ಸನ್ಮಂಡು ಆಗುವುದು

ಜಮ್ಮು ಮತ್ತು ಕಾಶ್ಮೀರ ಭೂ ಸುಧಾರಣೆ ಕಾನೂನು ಸಪ್ಲೈಮ್ ಮಾಡಲು ಜಮ್ಮುವಿನಲ್ಲಿ ನಡೆದ ಮಂತ್ರಿ ಮಂಡಲದ ಸಭೆ ನಿರ್ಧರಿಸಿದೆ ಕಾನೂನಿನಲ್ಲಿರುವ ನ್ಯೂನತೆಗಳನ್ನು ಕುರಿತು ಮನವಿ ಅರ್ಪಿಸಿದ ನಾನಾ ಭಾಗದ ಜನ ಕಾರಣ, ಕಾನೂನನ್ನು ಪುನರ್ವಿಮರ್ಶೆ ಮಾಡಲಾಗುವುದು.

★

ಇಂದಿರಾ ಗಾಂಧಿಯವರಿಂದ ಸಿದ್ಧ

ಚುನಾವಣೆ ಪದ್ಧತಿಯನ್ನೊಳಗೊಂಡು, ಆಡಳಿತ ಸುಧಾರಣೆಯನ್ನೊಳಗೊಂಡು ಸರ್ವ ಪ್ರಮುಖ ವಿಚಾರಗಳನ್ನು ತೀವ್ರವಾಗಿ ವಿರೋಧ ಪಕ್ಷಗಳೊಡನೆ ದುಂಡು ಮೇಜು ಪರಿಷತ್ತಿನಲ್ಲಿ ಪರಿಶೀಲಿಸಲು ತಾವು ಸಿದ್ಧ ವೆಂದು ಪ್ರಧಾನಿ ಇಂದಿರಾ ಲೋಕ ಸಭೆಯಲ್ಲಿ ತಿಳಿಸಿದರು

★

ಮಾರ್ಚಿ ತಿಂಗಳಿಗೆ ಅಹಾರ ಬಿಡುಗಡೆ

ಈ ತಿಂಗಳಿಗೆ ಮೈಸೂರು ಜಿಲ್ಲೆಗೆ 38 ಸಾವಿರ ಕ್ವಿಂಟಾಲ್ ಆಹಾರ ಧಾನ್ಯ ಬಿಡುಗಡೆ ಮಾಡಿರುವುದಾಗಿ ಜಿಲ್ಲಾಧಿಕಾರಿ ಶ್ರೀ ಆರ್ಯ ಮಿತ್ತರವರು ತಿಳಿಸಿರುವರು ಮೈಸೂರು ನಗರಕ್ಕೆ 12195 ಕ್ವಿಂಟಾಲು ಅಕ್ಕಿ, 3975 ಕ್ವಿಂಟಾಲು ಸಕ್ಕರೆ ಬಿಡುಗಡೆ ಮಾಡಿರುವುದಾಗಿ ಅವರು ತಿಳಿಸಿದರು.

★

ಉಚ್ಚಾವಾಸ ಮಂದುವರಿಯುತ್ತಿದೆ

ಮೈಸೂರು ಎಂ ಡಿ ಟಿ ಡಿ ಬಿ ಕಾಲೇಜು ಅಧ್ಯಾಪಕರ ಮುಷ್ಕರ ತಂಡತಂಡವಾಗಿ ನಡೆಯುತ್ತಿದೆ

●

ಪೋಲೀಸರಿಗೆ ಗಾಯ ನಿಶೇಧಾಜ್ಞೆ ಜಾರಿ

ಸೀಗೆಹಟ್ಟಿ ಸವಾಯಿಪಾಳ್ಯ ಬಡಾವಣೆಯಲ್ಲಿ ಎರಡು ಗುಂಪುಗಳಲ್ಲಿ ಆದ ಘರ್ಷಣೆಯಲ್ಲಿ ಕೆಲವು ಜನರಿಗೆ, ಓರ್ವ ಸಬ್ ಇನ್ಸ್ಪೆಕ್ಟರ್ ಹಾಗೂ ಕೆಲವು ಪೋಲೀಸರಿಗೆ ಗಾಯಗಳಾಗಿವೆ ಘರ್ಷಣೆಯಲ್ಲಿ ಒಂದು ಗಾಡಿ, ಒಂದು ಗುಡಿಸಲು ಹಾಗೂ ಎರಡು ಪಣ್ಣ ಅಂಗಡಿಗಳು ಭಸ್ಮವಾದವು 35 ನೇ ವಿಧಿ ಪೋಲೀಸು ಶಾಸನದ ಪ್ರಕಾರ ಸಭೆ ಮೆರವಣಿಗೆ ನಿಶೇಧವಾಗಿದೆ.

For Large Range of Daily Wear

Nylex, Cotton, Voile, etc Sarees
in up-to-date Designs

Please Visit :

Bank Road Bahusar

Contribute Liberally

to the National Defence Fund

ವುಡ್‌ಲಾಂಡ್ಸ್ 28 2 75 ರಿಂದ

ಅಮೋಘ ಆರಂಭ

ದಾರಿ ತಪ್ಪಿದ ಮಗ

ಅಪೂರ್ವ ಕನ್ನಡ ಕಲಾಕೃತಿ ಪಾತ್ರ– ರಾಜಕುಮಾರ್ (ದ್ವಿಪಾತ್ರದಲ್ಲಿ)

ವಜ್ರಮುನಿ, ಅಶ್ವತ್ಥ್, ಬಾಲಕೃಷ್ಣ, ಕಲ್ಪನ, ಆರತಿ ದಿನ ೫ ಪ್ರದರ್ಶನಗಳು

ಅಪೇರಾ 28 2 75 ರಿಂದ

ದಾವತ್

ಅಮೋಘ ಹಿಂದಿ ಕಲರ್ ಚಿತ್ರ

ಪಾತ್ರ – ಸೈಲೇಶ್ ಕೌಲ್ ಜಯಶ್ರೀ ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ



Protect the Cow

Help The Gorakshana

— Humanitarian Propoganda Monthly —

Edited Printed and Published by Dharmapracharanirata M S. Krishna Rao (Proprietor) at the Satvavadi Press, Chamarajapuram Mysore